**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>**

## ಸಿ.ಸಿ. ಸಂಖ್ಯೆಃ 549/2021

**ಸಾಕ್ಷಿಯನ್ನು ದಿಃ 12.02.2024 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಲೀಲಾವತಿ | ಸಿ.ಡಬ್ಲ್ಯೂಃ **2** | ಪಿ.ಡಬ್ಲ್ಯೂಃ **2** |
| ಗಂಡನ ಹೆಸರು | ರುದ್ರಯ್ಯ | | |
| ವಯಸ್ಸು | 55 ವರ್ಷ | | |
| ಕೆಲಸ | ಗೃಹಿಣಿ | | |
| ವಾಸಸ್ಥಳ | ಲಕ್ಷ್ಮೀಪುರ, ಹುಣಸೂರು | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

1. ಚಾಸಾ-1 ನನ್ನ ಮಗಳು, ಚಾಸಾ-3 ನನ್ನ ಗಂಡ, ಚಾಸಾ-4 ನನ್ನ ಮಗ, ಚಾಸಾ-5 ರವರ ಪರಿಚಯ ಇಲ್ಲ. 2,3 ನೇ ಆರೋಪಿತರು ನನ್ನ ಬೀಗರು. 1 ನೇ ಆರೋಪಿ ನನ್ನ ಅಳಿಯ. 4 ನೇ ಆರೋಪಿ ವಾಣಿ1 ನೇ ಆರೋಪಿಯ ಎರಡನೇ ಹೆಂಡತಿ. 5 ನೇ ಆರೋಪಿ 4 ನೇ ಆರೋಪಿ ತಮ್ಮ. 6 ನೇ ಆರೋಪಿ 4 ನೇ ಆರೋಪಿ ತಂದೆ, 7 ನೇ ಆರೋಪಿ 4 ನೇ ಆರೋಪಿ ತಾಯಿ. ಅವರೆಲ್ಲಾ ನನಗೆ

2. ಸುಮಾರು 9 ವರ್ಷಗಳ ಹಿಂದೆ 1 ನೇ ಆರೋಪಿಗೆ ಚಾಸಾ-1 ರವರನ್ನು ಕೊಟ್ಟು ಕುಶಾಲನಗರದ ಕೊಡಗು-ಸಮಾಜದಲ್ಲಿ ಮದುವೆ ಮಾಡಿದ್ದೇವೆ. ಮದುವೆ ಸಮಯ ಆರೋಪಿ ಚಾಸಾ-1 ರವರನ್ನು ಚೆನ್ನಾಗಿ ನೋಡಿಕೊಳ್ಳುವುದಾಗಿ ಹೇಳಿದ್ದರು. 1 ನೇ ಆರೋಪಿ ತಂದೆ ತಾಯಿ ಚಾಸಾ-1 ಹಾಗೂ 1 ನೇ ಆರೋಪಿ ಮದುವೆಗೆ ಬಂದಿರಲಿಲ್ಲ. ಆದರೆ ಮದುವೆ ಆದ ನಂತರ 2-3 ಬಾರಿ 2,3 ನೇ ಆರೋಪಿತರು ಹುಣಸೂರಿನಲ್ಲಿ ಚಾಸಾ-1 ರವರ ಮನೆಗೆ ಬಂದಿದ್ದರು. ಆಗ 2,3 ನೇ ಆರೋಪಿತರು ಚಾಸಾ-1 ರವರನ್ನು ಚೆನ್ನಾಗಿ ನೋಡಿಕೊಳ್ಳುತ್ತೇವೆ ಎಂದು ಹೇಳಿದರು.

3. ಮದುವೆ ಆದ 3 ವರ್ಷಗಳವರೆಗೆ 1 ನೇ ಆರೋಪಿ ಹಾಗೂ ಚಾಸಾ-1 ರವರು ಚೆನ್ನಾಗಿದ್ದರು. ಸದರಿ ದಾಂಪತ್ಯದಿಂದ ಒಂದು ಗಂಡು ಮಗು ಹಾಗೂ ಒಂದು ಹೆಣ್ಣು ಮಗು ಜನಿಸಿರುತ್ತದೆ. ಸದರಿ ಗಂಡು ಮಗುವಿಗೆ 8 ಹಾಗೂ ಹೆಣ್ಣು ಮಗುವಿಗೆ 6 ½

ವರ್ಷ ಆಗಿರುತ್ತದೆ. ನಂತರ 1 ನೇ ಆರೋಪಿ ತಾನು ಎರಡನೇ ಮದುವೆ ಮಾಡಿಕೊಂಡ ನಂತರ ಚಾಸಾ-1 ರವರಿಗೆ ಕಿರುಕುಳ ನೀಡುತ್ತಿದ್ದರು. 1 ನೇ ಆರೋಪಿ ಎರಡನೇ ಮದುವೆ ಆಗಿರುವುದನ್ನು ಅವರ ಎರಡನೇ ಹೆಂಡತಿಯಾದ 4 ನೇ ಆರೋಪಿ ಸ್ವತಃ ಬಂದು ಹೇಳಿದಾಗ ನಮಗೆ ಗೊತ್ತಾಗಿರುತ್ತದೆ. ಆದರೂ ಸಹ 1 ನೇ ಆರೋಪಿ ಚಾಸಾ-1 ರವರಿಗೆ ನನಗೆ ಹಣ ಕೊಡಿ, ಇಲ್ಲದಿದ್ದರೆ ಡೀವ್ರೋರ್ಸ್ ಕೊಡುತ್ತೇನೆ ಎಂದು ಕಿರುಕುಳ ನೀಡುತ್ತಿದ್ದರು.

4. ಚಾಸಾ-1 ರವರು ಹುಣಸೂರಿನ ಮನೆಯಲ್ಲಿದ್ದಾಗ 1,4 ನೇ ಆರೋಪಿತರು ಸೇರಿ ವಿಷ ಕುಡಿಸಿದರು. ಆ ಸಮಯದಲ್ಲಿ ನಾವು ಕುಶಾಲನಗರದಲ್ಲಿದ್ದೇವು. ಆ ಸಮಯದಲ್ಲಿ ನಾನು ಹಾಗೂ ನನ್ನ ಮಗ ಹುಣಸೂರಿಗೆ ಬಂದು ಚಾಸಾ-1 ರವರನ್ನು ಹುಣಸೂರು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವು. ನಂತರ ಇಲ್ಲಿ ಆಗುವುದಿಲ್ಲ ಎಂದು ಹೇಳಿದಾಗ ಮೈಸೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವು.

**ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಇದೆ.

(ಶಿರಿನ್ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ. ಎಂ. ಎಫ್. ಸಿ. , ಹುಣಸೂರು.